

(6ನೇ ಪುಟದಿಂದ)

ರಿವರ್‌ಟರ್ನ್ ಸಾಮಾನ್ಯವಾಗಿ ದಕ್ಷಿಣ ಏಷ್ಯಾದ ರಾಷ್ಟ್ರಗಳಲ್ಲಿ ಮಾತ್ರ ಕಂಡು ಬರುವ ಹಕ್ಕಿ. ಭಾರತ, ಪಾಕಿಸ್ತಾನ, ನೇಪಾಳ, ಭೂತಾನ್, ಬಾಂಗ್ಲಾ, ಮ್ಯಾನ್ಮಾರ್, ಥಾಯ್ಲಂಡ್, ಲಾವೋಸ್, ವಿಯೆಟ್ನಾಂ, ದಕ್ಷಿಣ ಚೀನಾದ ಪ್ರದೇಶಗಳಲ್ಲಿ ಇವುಗಳ ವಸತಿ ಹೆಚ್ಚು. ಪರಿಸರ ಮಾಲಿನ್ಯದ ಹೆಚ್ಚಳ ಮತ್ತು ನೆರೆ ಹಾವಳಿಗಳಿಂದ ಇತ್ತೀಚಿನ ವರ್ಷಗಳಲ್ಲಿ ಜಗತ್ತಿನಾದ್ಯಂತ ರಿವರ್‌ಟರ್ನ್‌ಗಳ ಸಂಖ್ಯೆ ಕಡಿಮೆಯಾಗುತ್ತಿದ್ದು, ಇವುಗಳನ್ನು ಅಳಿವಿನ ಅಂಚಿನಲ್ಲಿರುವ ಪಕ್ಷಿಗಳೆಂದೇ ಗುರುತಿಸಲಾಗಿದೆ. ಕೆಲವು ವರ್ಷಗಳ ಹಿಂದೆ ಥಾಯ್ಲಂಡ್‌ನಲ್ಲಿ ಯಥೇಚ್ಛವಾಗಿದ್ದ ಇವುಗಳ ಸಂಖ್ಯೆ ಕಳೆದ ವರ್ಷದಿಂದ ಇಲ್ಲವೇ ಇಲ್ಲ ಎಂಬಂತಾಗಿರುವುದು ವರದಿಯಾಗಿದೆ. ಕಾಂಬೋಡಿಯಾದಲ್ಲೂ ರಿವರ್‌ಟರ್ನ್ ಸಂತತಿ ವೇಗವಾಗಿ ನಶಿಸುತ್ತಿದೆ.

ರಿವರ್‌ಟರ್ನ್‌ಗಳು ಮಾರ್ಚ್– ಮೇ ತಿಂಗಳಲ್ಲಿ ಮೊಟ್ಟೆ ಇಡುತ್ತವೆ. ಸಾಮಾನ್ಯವಾಗಿ ಮರಳದಿನ್ನೆಯ ಬದಿಯಲ್ಲಿ, ಕಲ್ಲು ಬಂಡೆಗಳ ಸಂದಿಗಳಲ್ಲಿ ಮೊಟ್ಟೆ ಇಡುವುದು ಇವುಗಳ ವೈಶಿಷ್ಟ್ಯ. ಮೀನು ಮತ್ತು ನದೀತೀರದ ಜಲಚರ, ಹುಳ ಹುಪ್ಪಟೆಗಳೇ ಇವುಗಳ ಮುಖ್ಯ ಆಹಾರ. ವಿಶ್ವದಾದ್ಯಂತ ಸುಮಾರು ಒಂದು ಲಕ್ಷದಷ್ಟು ಮಾತ್ರ ಇರುವ ರಿವರ್‌ಟರ್ನ್‌ಗಳ ಪೈಕಿ ಅರ್ಧದಷ್ಟು ದಕ್ಷಿಣ ಭಾರತದಲ್ಲೇ ವಾಸಿಸುತ್ತಿವೆ ಎನ್ನಲಾಗಿದೆ. ತುಂಗಾ ತೀರಕ್ಕೂ ಇವುಗಳ ವಲಸೆ ನಿಜಕ್ಕೂ ಖುಷಿ ಕೊಟ್ಟ ಸಂಗತಿ.

